ಮಾಡಿದ್ದ ಮನೆಯ ಹಿಂದಿದ್ದ ಕೈದೋಟದಲ್ಲಿದ್ದ ನಮ್ಮ ಮನೆಯನ್ನು ತೋರಿಸಿದರು.

ಗೃಹಪ್ರವೇಶ ಮಾಡಿದೆವು. ದೂರ ದೇಶದಲ್ಲಿ ನಮ್ಮಿಬ್ಬರ ಅಜ್ಞಾತವಾಸ ಆರಂಭವಾಯಿತು. ಗಮನಿಸಿದೆವು – ಅದೊಂದು ಕಟ್ಟಿಗೆಯಿಂದ ಕಟ್ಟಿದ ಚಂದದ ಮನೆ. ಪಾವಟಿಗೆ, ಗೋಡೆ, ಛತ್ತು, ಕಾಂಪೌಂಡು, ಮಂಚ, ಕುರ್ಚಿ, ಮೇಜು ಎಲ್ಲವೂ ಕಟ್ಟಿಗೆಯದು. ಈ ಕಟ್ಟಿಗೆಯನ್ನು ಜಗತ್ತಿನ ಬೇರೆ ಬೇರೆ ದೇಶಗಳಿಂದ ಅಮೆರಿಕ ತರಿಸಿಕೊಳ್ಳುತ್ತದೆ. ಕಟ್ಟಿಗೆಯ ಮನೆಗಳನ್ನು ಅತಿ ಚಳಿ ಬೀಳುವ ಹಿಮಾಲಯದಲ್ಲಿ ನಾವು ಕಂಡಿದ್ದೆವು. ಅಮೆರಿಕೆಯ ಇನ್ನೊಂದು ತುದಿಯಲ್ಲಿರುವ ನ್ಯೂಯಾರ್ಕ್, ವಾಷಿಂಗ್ಟನ್‌ಗಳಿಗೆ ಹೋಲಿಸಿದರೆ, ಕ್ಯಾಲಿಫೋರ್ನಿಯಾ ಅಂತಹ ಚಳಿ ಪ್ರದೇಶವಲ್ಲ. ಆದರೂ ಕಟ್ಟಿಗೆಯ ಮನೆಗಳೇಕೆ? ಇದಕ್ಕೆ ಉತ್ತರ ನಂತರ ತಿಳಿಯಿತು. ಕ್ಯಾಲಿಫೋರ್ನಿಯಾ ಭೂಕಂಪದ ಪ್ರದೇಶವಾಗಿತ್ತು. ಅಮೆರಿಕದ ಸಿರಿವಂತ ರಾಜ್ಯಗಳಲ್ಲಿ ಒಂದಾದ ಕ್ಯಾಲಿಫೋರ್ನಿಯಾಕ್ಕೆ ಭೂಕಂಪ, ಕಡಿಮೆ ಮಳೆ, ಬರಗಾಲ, ಕಾಳ್ಗಿಚ್ಚು, ಚಂಡಮಾರುತಗಳು ಸೆರಗಿನ ಕೆಂಡಗಳು. ನಾವು ಸ್ಯಾನ್‌ಫ್ರಾನ್ಸಿಸ್ಕೊ ಶಹರಕ್ಕೆ ಹೋದಾಗ ಭೂಕಂಪದ ಪರಿಣಾಮಗಳನ್ನು ಕಂಡೆವು. ಕಡಲ ವ್ಯಾಪಾರಗಳಿಂದ ಸಿರಿವಂತರಾದ ಬಿಳಿಯರು, ಈ ಬಂದರು ನಗರದಲ್ಲಿ ಬೃಹದಾಕಾರದ ಸರಕುಕೋಠಿ, ಚರ್ಚು, ಗಗನಚುಂಬಿ ಕಚೇರಿಗಳನ್ನು ಕಟ್ಟಿದ್ದರು. ಭೂಭಾಗವನ್ನು ಛೇದಿಸಿದ ಕಡಲ ಕೊಲ್ಲಿಯ ಮೇಲೆ ಕಬ್ಬಿಣದ ಗೋಲ್ಡನ್ ಬ್ರಿಜ್ ನಿರ್ಮಿಸಿದ್ದರು. ಆದರೆ ಇಟ್ಟಿಗೆ–ಕಲ್ಲುಗಳಿಂದ ಕಟ್ಟಿದ ಅನೇಕ ಹಳೆಯ ಕಟ್ಟಡಗಳು ಬಿರುಕುಬಿಟ್ಟಿದ್ದವು. ಬಿರುಕುಗಳಿಗೆ ರಿವಿಟ್ ಹಾಕಿ ಬಂಧಿಸಿ, ಕುಸಿಯದಂತೆ ತಡೆಯಲಾಗಿತ್ತು. ಭೂಕಂಪವಾದರೆ ಹೆಚ್ಚು ಅನಾಹುತ ಆಗದಂತೆ, ಕಾಂಕ್ರೀಟು ಇಟ್ಟಿಗೆಯಿಲ್ಲದೆ, ಕಬ್ಬಿಣದ ಅಸ್ಥಿಪಂಜರಕ್ಕೆ ಕಟ್ಟಿಗೆಯ ರೀಪು ಪಕಾಸು ಹಲಗೆ ಹೊಡೆದು ಇಮಾರತುಗಳನ್ನು ಎಬ್ಬಿಸಲಾಗಿತ್ತು. ನಾಗರಿಕರು ಕಟ್ಟಿಗೆಯ ಮನೆಗಳನ್ನೇ ಕಟ್ಟಬೇಕೆಂಬ ನಿಯಮವನ್ನು ಸರ್ಕಾರ ಜಾರಿಗೊಳಿಸಿತ್ತು. ಆದರೆ ಈ ಕಟ್ಟಿಗೆ ಮನೆಗಳೇ ಲಾಕ್ಷಾಗೃಹಗಳಾಗಿ, ಕಾಡ್ಗಿಚ್ಚು ಬಿದ್ದಾಗ ಇಂಧನವಾಗುವ ಅಪಾಯವನ್ನು ಹೊಟ್ಟೆಯಲ್ಲಿ ಇಟ್ಟುಕೊಂಡಿದ್ದವು. ಇಲ್ಲಿ ಕಾಡ್ಗಿಚ್ಚಿನ ಅನಾಹುತ ವಿಪರೀತಕ್ಕೆ ಹೋಗಲು ಇದೂ ಒಂದು ಕಾರಣ.

ಕ್ಯಾಲಿಫೋರ್ನಿಯಾದ ಕಾಡ್ಗಿಚ್ಚಿಗೆ ಇನ್ನೊಂದು ಕಾರಣ, ಅಲ್ಲಿನ ಕಾಡು. ನಾವಿದ್ದ ಪಾಲೊಆಲ್ಟೊ (ಸ್ಪ್ಯಾನಿಶ್ ಭಾಷೆಯಲ್ಲಿ ಇದರರ್ಥ: ಎರಡು ದೊಡ್ಡಮರ) ಸುತ್ತಮುತ್ತ ಕಾಡಿನೋಪಾದಿಯಲ್ಲಿ ಬೆಳೆಸಲಾದ ಮರಗಿಡಗಳಿದ್ದವು. 19ನೇ ಶತಮಾನದಲ್ಲಿ ಸ್ಪೇನಿಗರು ಯುದ್ಧದಲ್ಲಿ ಗೆದ್ದು ಆಕ್ರಮಿಸಿಕೊಂಡಿದ್ದ ಈ ಭೂಭಾಗವನ್ನು ಅಮೆರಿಕನ್ನರು ಹೋರಾಡಿ ಮರಳಿ ಪಡೆದಿದ್ದರು. ಈ ಹೋರಾಟದಲ್ಲಿ ಸ್ಟ್ಯಾನ್‌ಫೋರ್ಡ್ ವಿವಿಯ ವಿದ್ಯಾರ್ಥಿಗಳೂ ಪ್ರಾಣ ಕಳೆದುಕೊಂಡಿದ್ದು, ಹುತಾತ್ಮರ ಸ್ಮಾರಕ ಸ್ಥಾಪಿಸಲಾಗಿತ್ತು. ಪ್ರತಿ ಉದ್ಯಾನದಲ್ಲಿ, ಶತಮಾನಗಳಷ್ಟು ಹಳೆಯ ದೇವದಾರು ಮರಗಳನ್ನು ಸಂರಕ್ಷಿಸಲಾಗಿತ್ತು. ನಾವಿದ್ದ ಮನೆಯ ಪಕ್ಕದಲ್ಲಿ ಪುಟ್ಟ ನದಿಯಿತ್ತು. ಅದರ ಎರಡೂ ಬದಿಗೆ ಎತ್ತರ ಬೆಳೆದ ಮರಗಳು. ಅವುಗಳ ಮೇಲೆ ಬಳ್ಳಿಗಳು ಹಬ್ಬಿ ನಿರ್ಮಾಣವಾದ ಹಳು. ಹೊಳೆಯ ಪಾರದರ್ಶಕ ಜಲದೊಳಗೆ ಪಟ್ಟೆಬಾತುಗಳು ಸಂಸಾರ ಸಮೇತ ವಿಹರಿಸುತ್ತಿದ್ದವು. ನಾವು ವಾಹನಗಳ ಕಿರಿಕಿರಿಯಿಲ್ಲದ ಹೊಳೆದಡದಲ್ಲಿ ದೀರ್ಘ ವಾಕ್ ಹೋಗುತ್ತಿದ್ದೆವು. ನಾವಿದ್ದ ಮನೆಗೂ ವಿಶ್ವವಿದ್ಯಾಲಯಕ್ಕೂ ಮೂರು ಕಿ.ಮೀ. ದೂರ. ಉಚಿತವಾಗಿ ಕರೆದೊಯ್ಯುವ ವಿಶ್ವವಿದ್ಯಾಲಯದ ಶಟಲ್ ಬಸ್ಸಿದ್ದವು. ಆದರೂ ತಾಳೆ ಜಾತಿಯ ಸಾಲು ಮರಗಳ ನಡುವಿನ ಹಾದಿಯಲ್ಲಿ, ಇಕ್ಕಡೆಯಲ್ಲೂ ಉಳಿಸಿಕೊಂಡಿರುವ ಕಾಡುಮರಗಳ ನಡುವೆ ನಡೆದು ಹೋಗುತ್ತಿದ್ದೆ. ವಿಶ್ವವಿದ್ಯಾಲಯದ ಬೆನ್ನಿಗೂ ಕಾಡುತುಂಬಿದ ಬೆಟ್ಟಗುಡ್ಡಗಳಿದ್ದವು. ನಾವೊಂದು ಭಾನುವಾರ ಅಲ್ಲಿಗೆ ಚಾರಣಕ್ಕೆ ಹೋಗಿದ್ದುಂಟು. ಕಡಿಮೆ ಮಳೆಯಿಂದ ರಸಹೀನವಾದ ಗಿಡಮರ; ಮಾಗಿಯ ಬಿರುಸಿಗೆ ಹಳದಿಗೆ ತಿರುಗಿದ ಹುಲ್ಲು. ಸಣ್ಣ ಕಿಡಿ ತಾಗಿದರೂ ಧಗ್ಗೆಂದು ಹತ್ತಿ ಉರಿಯಲು ತಯಾರಾದ ಅಗ್ನಿವೇದಿಕೆ ಆಗುತ್ತವೆ. ಸಿಡಿಲಿನಿಂದಲೋ ವಿದ್ಯುತ್ ತಾರುಗಳಿಂದಲೋ ಬಿದ್ದ ಕಿಡಿ ಕಾಡನ್ನು ಸುಡಲಾರಂಭಿಸುತ್ತದೆ. ಸಮುದ್ರದ ಮೇಲಿನಿಂದ ಬೀಸುವ ಬಿರುಗಾಳಿ ಇದನ್ನು ಎಲ್ಲೆಡೆಗೆ ಹಬ್ಬಿಸುತ್ತದೆ. ಕ್ಯಾಲಿಫೋರ್ನಿಯಾ ಕಾಡುಗಳು ಖಾಂಡವ ದಹನದ ಜಾಗಗಳಾಗುತ್ತವೆ.

ಪಾಲೊಆಲ್ಟೊನಲ್ಲಿ ಬೇಸಿಗೆಯಾದರೂ ರಾತ್ರಿ ಯಾವಾಗಲೋ ಮಳೆ ಬಂದು ನೆಲಕ್ಕೆ ಜಳಕ ಮಾಡಿಸಿ ಹೋಗಿರುತ್ತಿತ್ತು. ಆಗಸ ಸಂಜೆಗೆ ಮುನಿಸಿಕೊಂಡಂತೆ ಬೂದುಬಣ್ಣಕ್ಕೆ ತಿರುಗುತ್ತಿತ್ತು. ನಾವು ಪ್ರತಿ ಸಂಜೆ ನಿರ್ಜನ ಬೀದಿಗಳಲ್ಲಿ ತಿರುಗಾಟ ಮಾಡುತ್ತಿದ್ದೆವು. ಕಟ್ಟಿಗೆಯಿಂದ ಕಟ್ಟಿದ ಒಂದಕ್ಕಿಂತ ಒಂದು ಚೆಲುವಾದ ವಿಶಿಷ್ಟ ವಿನ್ಯಾಸದ ಮನೆಗಳು. ಪ್ರತಿಯೊಂದು ಮನೆಯ ಕೈದೋಟದಲ್ಲಿ ಹೂವು ಹಣ್ಣಿನ ಗಿಡಗಳು. ಕಿತ್ತಲೆ ಕೀಳುವವರಿಲ್ಲದೆ ನೆಲಕ್ಕೆ ಉದುರಿದ್ದವು. ಹೂವು ಮುಡಿವವರಿಲ್ಲದೆ ಗೊಂಚಲು ಗೊಂಚಲಾಗಿದ್ದವು. ಪ್ರತಿ ಬಡಾವಣೆಗೊಂದು ಸಣ್ಣ ಕಮ್ಯುನಿಟಿ ಪಾರ್ಕು. ಪಾರ್ಕಿನಲ್ಲಿ ಬೀದಿಯವರು ಸೊಪ್ಪು ತರಕಾರಿ ಬೆಳೆದುಕೊಂಡಿದ್ದರು. ಬಿಸಿಲು ಬಿದ್ದಾಗ ಹೆಂಗಸರು ಗಂಡಸರು ಕಿರಿದಾದ ಉಡುಪಿನಲ್ಲಿ ಅದರ ಹುಲ್ಲುಹಾಸಿನ ಮೇಲೆ ಮಲಗಿರುತ್ತಿದ್ದರು. ನಡಿಗೆ–ಓಟ ಮಾಡುವುದು, ಮಕ್ಕಳನ್ನು ಆಡಿಸುವುದು, ಕಟ್ಟಿಗೆಯ ಬೆಂಚುಗಳ ಮೇಲೆ ತಿನಿಸು ಹರಡಿಕೊಂಡು ಮೆಲ್ಲುವುದು ಮಾಡುತ್ತಿದ್ದರು.

ನಾವಲ್ಲಿದ್ದಾಗ ಭಾರತೀಯ, ಆಫ್ರಿಕನ್, ಚೀನೀ ಕುಟುಂಬಗಳ ಸ್ನೇಹ ಬೆಳೆಸಿದೆವು. ಆದರೂ ನಿರ್ಜನ ಬೀದಿಗಳು ನನ್ನಲ್ಲಿ ಒಂಟಿತನ ಹುಟ್ಟಿಸುತ್ತಿದ್ದವು. ರಜಾದಿನಗಳಲ್ಲಿ ಕೆಲವರು ಸಂಜೆಯ ಹೊತ್ತು ನಾಯಿಗಳನ್ನು ಕರೆದುಕೊಂಡು ಹೊರಬರುತ್ತಿದ್ದರು. ಸಂಜೆ ಯೂನಿವರ್ಸಿಟಿ ರೋಡು ಜನರಿಂದ ತುಂಬಿ ಹೊಸ ಉಸಿರನ್ನು


ಕೊಲ್ಲಿಗಳನ್ನು ಬೆಸೆಯುವ ಗೋಲ್ಡನ್ ಬ್ರಿಜ್


ಹಾಡಹಗಲಲ್ಲೂ ನಿರ್ಜನವಾಗಿರುವ ಬೀದಿ